Notice of an Adjournment Motion

Re :—Demands of the Employees of the Binny Mills and alleged excesses by the Management

† ಶ್ರೀ ಕೆ. ಪ್ರಭಾಕರ್ ರೆಡ್ಡಿ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಚಾಮರಾಜಪೇಟೆಯಲ್ಲಿರತಕ್ಕಂಥ ಬಿನ್ನಿಮಿಲ್‌ನಲ್ಲಿ ಸುಮಾರು 7 ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಮೊನ್ನೆ ದಿವಸ ಅಂದರೆ 5ನೇ ತಾರೀಖು 3-15 ಗಂಟೆಗೆ, ಆ ಕಾರ್ಮಿಕರಿಗೆ ಸುಮಾರು 20 ವರ್ಷಗಳಿಂದಲೂ ಕೊಟ್ಟುಕೊಂಡು ಬರುತ್ತಿದ್ದ ಬೋನಸ್ಸನ್ನು ಕೊಡುವ ಬಗ್ಗೆ ಕಾರ್ಮಿಕರು ಕೇಳಿದಾಗ, ಅಲ್ಲರತಕ್ಕಂಥ ಪರ್ಸನಲ್ ಮ್ಯಾನೇಜರ್ ನುದರ್‌ರಾಜ್ ಎನ್ನುವವರು ತಕ್ಷಣ ಪೋಲೀಸ್‌ರನ್ನು ಬಿನ್ನಿಮಿಲ್‌ನೊಳಕ್ಕೆ ಕರೆಸಿ ಅಲ್ಲಿದ್ದಂಥ ಕಾರ್ಮಿಕರನ್ನು ಹೆದರಿಸಿದ್ದಾರೆ. ಮತ್ತೆ ಕೆಲವು ಕಾರ್ಮಿಕರನ್ನು ಸ್ಪೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದಿದ್ದಾರೆ ಮತ್ತೆ ಕೆಲವರಿಗೆ ಡಿ.ಐ.ಆರ್. ಕೆಳಗೆ ಜೈಲಿಗೆ ಕಳುಹಿಸುತ್ತೇವೆಂದು ಹೆದರಿಸಿದ್ದಾರೆ. ಇದರಿಂದ ಕಾರ್ಮಿಕರಲ್ಲಿ ಭೀತಿ ಉಂಟಾಗುತ್ತದೆ. ಇಂಥ ಪರಿಸ್ಥಿತಿ ಮಿಲ್‌ನಲ್ಲಿ ಉಂಟಾಗಿರುವುದರಿಂದ ಕೆಲವು ಕಾರ್ಮಿಕರು ಕೆಲಸಕ್ಕೆ ಹೋಗಲು ಹೆದರುತ್ತಿದ್ದಾರೆ. ಮ್ಯಾನೇಜ್‌ಮೆಂಟ್‌ನವರು ಪೋಲೀಸರ ರಕ್ಷಣೆ ಇಟ್ಟುಕೊಂಡು ಈ ರೀತಿಯಾಗಿ ಕಾರ್ಮಿಕರಿಗೆ ತೊಂದರೆಯನ್ನುಂಟುಮಾಡುತ್ತಿದ್ದಾರೆ.

ಅಧ್ಯಕ್ಷರು.—ಸರ್ಕಾರದವರು ಇದರ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳೋಣ ಮಾನ್ಯ ಸದಸ್ಯರು, ಕುಳಿತುಕೊಳ್ಳಬೇಕು.

† ಶ್ರೀ ಎಂ. ಎಸ್. ಕೃಷ್ಣನ್ (ಪುಲ್ಲೇಶ್ವರಂ) —ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಒಂದೇ ಒಂದು ಮಾತು ಹೇಳಬೇಕಾಗಿದೆ. ಇವತ್ತು ತುರ್ತು ಪರಿಸ್ಥಿತಿ ಬಂದ ಮೇಲೆ ಅದನ್ನು ಕೆಲವರು ಸರಿಯಾಗಿ ಉಪಯೋಗ ಮಾಡುತ್ತಿದ್ದಾರೆ ಮತ್ತೆ ಕೆಲವರು ದುರುಪಯೋಗವನ್ನೂ ಕೂಡ ಮಾಡಿಕೊಳ್ಳುತ್ತಿದ್ದಾರೆ. ಆ ರೀತಿ ದುರುಪಯೋಗಪಡಿಸಿಕೊಳ್ಳುವ ಹವ್ಯಾಸ ಜಾಸ್ತಿಯಾಗುತ್ತಿದೆ. ಕಾರ್ಮಿಕರ ವಿರುದ್ಧ ಪೋಲೀಸರು ಏನಾದರೂ ವರ್ತನೆ ಮಾಡಿದ್ದರೆ ಅದನ್ನು ನರಿಪಡಿಸುವುದಕ್ಕೆ ಇವತ್ತಿನ ದಿವಸ ನೀವು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

SRI KONANDUR LINGAPPA.—Hear... Hear...

ಶ್ರೀ ಎಂ. ಎಸ್. ಕೃಷ್ಣನ್.—ಇವತ್ತು ನಾನು ಎಮರ್ಜೆನ್ಸಿ ಬರುವುದು ತಪ್ಪು ಎಂದು ಹೇಳುತ್ತಿಲ್ಲ. ಮಾನ್ಯ ಕೊಣಂದೂರು ಲಿಂಗಪ್ಪನವರು ಎಮೆರ್ಜೆನ್ಸಿನೇ ಬೇಡವೆಂದು ಹೇಳುವಂಥ ಜನ, ನೀವು ಏತಕ್ಕೆ ಹಿಯರ್ ಹಿಯರ್ ಎಂದು ಹೇಳುತ್ತೀರಿ. ಈಗ ಪ್ರಶ್ನೆ ಏನೆಂದರೆ, ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳತಕ್ಕಂಥದ್ದನ್ನು ತಡೆಗಟ್ಟುವುದು, ಎರಡನೆಯದು ಅಲ್ಲಿ ಬೋನಸ್ ವಿಚಾರದಲ್ಲಿ ಜಂಜಾಟವಿದೆ. ಅದರಲ್ಲಿ ಒಂದು ಅತ್ಯಪ್ರಿಯವಾಗಿದೆ, ಆ ಅತ್ಯಪ್ರಿಯವನ್ನು ಹೋಗಲಾಡಿಸುವುದಕ್ಕೆ ಮಂತ್ರಿಗಳೂ, ಇಲಾಖೆಯವರೂ ಪ್ರಯತ್ನ ಪಡಬೇಕು. ಮಾನ್ಯ ಮಂತ್ರಿಗಳವರು ಇದರ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು.

† ಶ್ರೀ ಎಸ್. ಎಂ ಯಾಹ್ಯ (ಆಬಕಾರಿ ಕಾರ್ಮಿಕ ಶಾಖೆಗಳ ಮಂತ್ರಿಗಳು).—ಮೊನ್ನೆ 5ನೇ ತಾರೀಖಿನ ದಿವಸ ಬಿನ್ನಿಮಿಲ್‌ನಲ್ಲಿ ಸ್ವಲ್ಪ ಟೆನ್‌ಷನ್ ನಡೆಯಿತು. ಅದು ಕಾರ್ಮಿಕ ರಂಗದಲ್ಲಿ ಇಂಥ ವಿಚಾರಗಳು ಆಗಾಗ್ಗೆ ಆಗುತ್ತಲೇ ಇರುತ್ತವೆ. ಇಲ್ಲಿ ಅದರ ಬಗ್ಗೆ ಅಸ್ಸರ್ಟ್‌ಮೆಂಟ್ ಮೋಷನ್ ತೆಗೆದುಕೊಂಡು ಬಂದು ಚರ್ಚೆ ಮಾಡುವಷ್ಟು ಪ್ರಾಮುಖ್ಯವಾದ ವಿಷಯವಲ್ಲ. ಮಾನ್ಯ ಕೊಣಂದೂರ್ ಲಿಂಗಪ್ಪನವರು ಟ್ರೇಡ್ ಯೂನಿಯನ್‌ನಲ್ಲಿ, ಟ್ರೇಡ್ ಯೂನಿಯನ್ ಮೂವ್‌ಮೆಂಟ್‌ನಲ್ಲಿ ಇದ್ದವರು ಅಲ್ಲ ಅವರಿಗೆ ನಾನು ಪೂರ್ಣ ವಿವರಗಳನ್ನು ಹೇಳಿದರೆ ಅರ್ಥವೂ ಆಗುವುದಿಲ್ಲ, ಆದುದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಬಿನ್ನಿಮಿಲ್‌ನಲ್ಲಿನ ವಿಚಾರ ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿದೆ. ಅದು ಮಾನ್ಯ ಪ್ರಭಾಕರ್ ರೆಡ್ಡಿಯವರಿಗೂ ಗೊತ್ತಿದೆ ಅಲ್ಲಿ 7 ಸಾವಿರ ಜನ ಕಾರ್ಮಿಕರು ಇದ್ದಾರೆ, ಅಲ್ಲಿ ಬೇಕಾದಷ್ಟು ಯೂನಿಯನ್ಸ್‌ಗಳು ಇವೆ. ಇವತ್ತು ಎಮೆರ್ಜೆನ್ಸಿಯನ್ನು ಎಲ್ಲೂ ದುರುಪಯೋಗ ಪಡಿಸುತ್ತಿಲ್ಲ, ಅಂಥ ವಿಷಯವನ್ನು

ನಮ್ಮ ಗಮನಕ್ಕೆ ತಂದರೆ ಅಂಥಹವರ ಮೇಲೆ ಖಂಡಿತ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿರತಕ್ಕಂಥ ಮ್ಯಾನೇಜ್‌ಮೆಂಟಿನವರಿಗೂ ಮತ್ತು ಯೂನಿಯನ್ಸ್‌ಗಳಿಗೂ ಗರಾಜೆ ಇದ್ದೇ ಇದೆ. ಎಂದು ಯೂನಿಯನ್‌ಗೂ ಮತ್ತೊಂದು ಯೂನಿಯನ್‌ಗೂ ಜಗಳ ಇದೆ. ಅದು ಎಲ್ಲಾ ಕಾರ್ಖಾನೆಗಳಿಗೂ ಆಗುತ್ತಲೇ ಇರುತ್ತದೆ. ಇಲ್ಲಿ ಆಡ್ಜರ್ನ್‌ಮೆಂಟ್ ಮೋಷನ್ ತರತಕ್ಕಂಥ ವಿಚಾರ ಇಲ್ಲವೇ ಇಲ್ಲ. ಮಾನ್ಯ ರೆಡ್ಡಿಯವರಿಗೆ ಅಷ್ಟು ವಿಚಾರ ಇನ್ನೂ ಗೊತ್ತಾಗಿಲ್ಲವೆಂದು ಕಾಣುತ್ತದೆ. ಕಾನೂನು ಪ್ರಕಾರ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತದೆ. ಬೋನಸ್ ವಿಚಾರ ಬಂದಾಗ ಅಲ್ಲಿ ಸ್ವಲ್ಪ ಟೆನ್‌ಷನ್ ಇತ್ತು. ಪೋಲೀಸರು ರಾಡರೂ ಏತಕ್ಕೆ ಬರುತ್ತಾರೆ ಅವರು ಅಲ್ಲಿ ರಾ ಅಂಡ್ ಆರ್ಡರನ್ನು ಮೇನ್‌ಟೇನ್ ಮಾಡಬೇಕಾಗುತ್ತದೆ. ರಾ ಅಂಡ್ ಆರ್ಡರನ್ನು ಮೇನ್‌ಟೇನ್ ಮಾಡುವುದು ಪೋಲೀಸರ ಕರ್ತವ್ಯ.

If the Police do not give protection, tomorrow the Hon'ble Members would say that the Police have not acted. Wherever there is tension and wherever there are quarrells and wherever there are inter or interaparty rivalry, then the police will have to appear on the scene and see that the law and order is maintained. That is what the Police have done in the Binny Mills.

MADAM SPEAKER.—In view of the statement made by the Hon'ble Minister, I withhold my consent to the adjournment motion.

KARNATAKA (ENHANCEMENT OF CERTAIN CESSES) BILL 1976

Motion To Consider

SRI M. Y. GHORPADE (Minister for Finance and Housing).—Madam, I beg to move:

"That the Karnataka (Enhancement of Certain Cesses) Bill, 1976 be taken into consideration".

MADAM SPEAKER: Motion moved.

"That the Karnataka (Enhancement of Certain Cesses) Bill, 1976 be taken into consideration.

2-00 P M.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ನಾನು ಬಜೆಟ್ ಭಾಷಣದಲ್ಲಿ ಈ ಎಜುಕೇಷನ್ ಸೆಸ್ ಮತ್ತು ಹೆಲ್ತ್ ಸೆಸ್ ಸ್ವಲ್ಪ ವಂಟ್ಟಿಗೆ ಜಾಸ್ತಿ ಮಾಡಬೇಕಾಗಂತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ, ಆ ಒಂದು ಉದ್ದೇಶದಿಂದಲೇ ಈ ಬಿಲ್ಲನ್ನು ತಂದಿರತಕ್ಕುದ್ದು. ಈಗ ಎಜುಕೇಷನ್ ಸೆಸ್ ವಂತ್ತು ಹೆಲ್ತ್ ಸೆಸ್ ಸ್ವಲ್ಪ ಜಾಸ್ತಿ ಮಾಡಬೇಕಾದರೆ ನೇರವಾದಂತ ಕಾರಣ ಇದೆ, ಈಗ ಹಳ್ಳಿಗಳಲ್ಲಿ ವಿಲೇಜ್ ಸ್ಕೂಲ ಬಿಲ್ಡಿಂಗ್ಸ್ ಬಹಳ ಕಡಿಮೆ ಇವೆ, ನಮ್ಮ ಲೆಕ್ಕದ ಪ್ರಕಾರ ಸುಮಾರು 10 ಸಾವಿರ ಶಾಲೆಗಳಲ್ಲಿ ಈಗ 30 ಸಾವಿರ ಹೊಸ ಸ್ಕೂಲಂ ರೂಮುಗಳ ಅವಶ್ಯಕತೆ ಇದೆ, ಆ ದೃಷ್ಟಿಯಿಂದ ವರ್ಷೇ ವರ್ಷೇ ಸ್ವಲ್ಪ ವಂಟ್ಟಿಗಾದರೂ ಈ ಕೊರತೆ ನಿವಾರಣೆ ಮಾಡಬೇಕು ಎಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಸ್ಕೂಲ್ಸ್ ಬಿಲ್ಡಿಂಗ್‌ಗೋಸ್ಕರ ಕಳೆದ ವರ್ಷ 20 ಲಕ್ಷ ರೂಪಾಯಿ ಮಾತ್ರ ಕೊಡಲಿಕ್ಕೆ ಸಾಧ್ಯವಾಯಿತು, ಅಂತಾದ್ದರಲ್ಲಿ ಈ ವರ್ಷ 1 ಕೋಟಿ 25 ಲಕ್ಷ ರೂಪಾಯಿ ಬಜೆಟ್ಟಿನಲ್ಲಿ ತೆರಿಸಿದ್ದೇವೆ. ಅದು ಅಲ್ಲದೆ ಅದನ್ನು ಖರ್ಚು ಮಾಡುವ ವಿಧಾನವನ್ನು ಸ್ವಲ್ಪವಂಟ್ಟಿಗೆ ಬದಲಾವಣೆ ಮಾಡಿದ್ದೇವೆ. ಹಳೆಯ ಪದ್ಧತಿ